**CW : 1**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.3726/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಗಣಪಯ್ಯ ಕೆ. |
| ತಂದೆಯ ಹೆಸರು | : | ವೆಂಕಟರಮಣಯ್ಯ |
| ಪ್ರಾಯ | : | 81 ವರ್ಷ |
| ಉದ್ಯೋಗ | | ನಿವೃತ್ತ ಅಧ್ಯಾಪಕ |
| ವಾಸಸ್ಥಳ | : | ಮಾಡ್ನೂರು ಗ್ರಾಮ |

ದಿನಾಂಕಃ**24.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-2 ನನ್ನ ಹೆಂಡತಿ. ನಾನು ಮಾಡ್ನೂರು ಗ್ರಾಮದ ಕೌಡಿಚ್ಚಾರು ಎಂಬಲ್ಲಿ ಶ್ರೀ ಕೃಪಾ ನಿಲಯದಲ್ಲಿ ವಾಸವಾಗಿರುತ್ತೇನೆ. ದಿ.5-7-2009 ರಂದು ನನ್ನ ಮನೆಗೂ ಮತ್ತು ಗೇಟಿಗೂ ಬೀಗ ಹಾಕಿ ಬೆ.11 ಗಂಟೆಗೆ ಹೊರಟು ನನ್ನ ಬಾವನ ಮನೆಗೆ ಬಂದಿದ್ದೆ. ನಾನು ಮತ್ತು ಚಾಸಾ-2 ಜೊತೆಗೆ ಬಂದಿದ್ದೆವು. ಸಂಜೆ ಸುಮಾರು 6.30 ರ ವೇಳೆಗೆ ಅದೇ ದಿನ ನಾವು ಮನೆಗೆ ವಾಪಸ್ಸು ಹೋದೆವು. ಮನೆಗೆ ಬಂದು ನೋಡಿದಾಗ ಗೇಟಿಗೆ ಹಾಕಿದ್ದ ಬೀಗ ಹಾಗೆಯೇ ಇತ್ತು. ಮನೆಗೆ ಹಾಕಿದ್ದ ಬೀಗದ ಕೊಂಡಿಯನ್ನು ತುಂಡು ಮಾಡಲಾಗಿತ್ತು. ಮನೆಯ ಮುಂದಿನ ಬೀಗ ಒಡೆದಿದ್ದರೂ ಕೂಡಾ ಒಳಗೆ ಚಿಲಕ ಹಾಕಿದ್ದರಿಂದ ಎದುರಿನ ಬೀಗ ತೆರೆದಿರಲಿಲ್ಲ. ನಂತರ ನಾವು ಹಿಂದಿನ ಭಾಗಿಲಿನಿಂದ ಹೋಗಿ ನೋಡಿದಾಗ ಅದು ತೆರೆದಿತ್ತು. ದೇವರ ಕೋಣೆಯ ಬಾಗಿಲಿಗೆ ಹಾಕಿದ ಬೀಗ ಇರಲಿಲ್ಲ. ಮನೆಯ ಒಳಗಡೆ ಪರಿಶೀಲನೆ ಮಾಡುವಾಗ ಒಂದು ಕಪಾಟು ನೆಲಕ್ಕೆ ಬಿದ್ದಿತ್ತು. ನೂಡಿದಾಗ ಒಂದು ಬಂಗಾರದ ಚೈನು, ಒಂದು ನೆಕ್ಲೆಸ್, 2 ಚಿನ್ನದ ಬಳೆಗಳು, 5 ಬಂಗಾರದ ಉಂಗುರಗಳು, ಒಂದು ಜೊತೆ ಬಂಗಾರದ ಕಿವಿಯ ರಿಂಗ್ ಹಾಗೂ ಒಂದು ಸಾವಿರ ರೂಪಾಯಿ ನಗದು ಕಳುವಾಗಿತ್ತು. ನನ್ನ ಕಳುವಾದ ಬಂಗಾಗದ ಒಟ್ಟು ಮೌಲ್ಯ 1,30,000/- ರೂ. ಆಗಬಹುದು. ಈ ಬಗ್ಗೆ ನಾವೆಲ್ಲಾ ಹುಡುಕಾಡಿ ನಂತರ ಸಂಪ್ಯ ಪೋ ಠಾಣೆಗೆ ದೂರು ನೀಡಿರುತ್ತೇವೆ. ನಾನು ನೀಡಿದ ದೂರನ್ನು ನೋಡುತ್ತಿದ್ದು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿರುತ್ತಾರೆ. ಅದನ್ನು ನೋಡುತ್ತಿದ್ದು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು

ಗುರುತಿಸಲಾಯಿತು. ನನ್ನ ಮನೆಯ ಕೊಟ್ಟಿಗೆಯಲ್ಲಿದ್ದ ಪಿಕ್ಕಾಸಿನ ಮೂಲಕ ನನ್ನ ಮನೆಯ ಬಾಗಿಲನ್ನು ತೆರೆದಿದ್ದರು. ಪಿಕ್ಕಾಸು ದೇವರ ಕೋಣೆಯ ಹತ್ತಿರ ಇತ್ತು. ಜೀವವಿಮಾ ನಿಗಮದವರು ನೀಡಿದ ಒಂದು ಬಂಗಾರ ಇಡುವ ಕರಡಿಗೆಯಲ್ಲಿ ಬಂಗಾರದ ಆಭರಣಗಳನ್ನು ಇಟ್ಟಿದ್ದೆವು. ಪಿಕ್ಕಾಸನ್ನು ಮತ್ತು ಪ್ಲಾಸ್ಟಿಕ್ ಕರಡಿಗೆಯನ್ನು ಪೊಲೀಸರು ಮಹಜರು ತಯಾರಿಸುವ ಕಾಲದಲ್ಲಿ ವಶಪಡಿಸಿಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಪೊಲೀಸರು ನನ್ನ ಮನೆಯಿಂದ ಕಳ್ಳತನವಾದ ಬಂಗಾರದ ಆಭರಣಗಳನ್ನು ತೋರಿಸಿದ್ದರು. ಆರೋಪಿತರನ್ನು ತೋರಿಸಿಲ್ಲ. ಬಂಗಾರದ ಆಭರಣಗಳನ್ನು ನಾನು ನ್ಯಾಯಾಲಯದ ಆದೇಶದನ್ವಯ ತೆಗೆದುಕೊಂಡು ಹೋಗಿರುತ್ತೇನೆ. ನ್ಯಾಯಾಲಯದ ಆದೇಶದನ್ವಯ ತೆಗೆದುಕೊಂಡು ಹೋಗಿದ್ದ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ತನಿಖಾಧಿಕಾರಿಯವರು ಆಭರಣಗಳ ಫೋಟೋವನ್ನು ತೆಗೆದಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ.

ದೂರು ದಾಖಲಾದ ನಂತರ ಬಂಟ್ವಾಳ ಪೊ. ಠಾಣೆಗೆ ಕರೆಸಿದ್ದರು. ಅಲ್ಲಿ ಆರೋಪಿ ಮಾಡಸ್ವಾಮಿ ಯನ್ನು ನನಗೆ ತೋರಿಸಿಲ್ಲ. ಪೊ. ಠಾಣೆಯಲ್ಲಿ ಆರೋಪಿಗಳು ನಮ್ಮ ಮನೆ ಕಳ್ಳತನ ಮಾಡಿದ್ದು ಎಂದು ತೋರಿಸಿದ್ದು ಗೊತ್ತಾಯಿತು. ಸದರಿ ಚಿನ್ನವನ್ನು ಉಪ್ಪಿನಂಗಡಿ ಪೋಲಿಸ ಠಾಣೆಯಲ್ಲಿ ನಾನು ನೋಡಿದ್ದೇನೆ. ಈ ಸಂಬಂದ ಪೋಲಿಸರಲ್ಲಿ ಮರು ಹೇಳಿಕೆ ನೀಡಿದ್ದೇನೆ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು : ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ಈ ದಿನ ನ್ಯಾಯಾಲಯದ ಸಮಕ್ಷಮ ಆರೋಪಿಯನ್ನು ಠಾಣೆಯಲ್ಲಿ ಪೊಲೀಸರು ತೋರಿಸಿದ್ದು ಆತನನ್ನು ನೋಡಿ ನಾನು ಗುರುತಿಸಿದ್ದರೂ ಕೂಡಾ ಈ ದಿನ ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** ಶ್ರೀ ಎಮ್ ಎಮ್ **ವಕೀಲರಿಂದ**ಃ ಆರೋಪಿ ಪರಃ

ನಮ್ಮ ಮನೆಯಲ್ಲಿ ನಾನು ಮತ್ತು ಚಾಸಾ2 ಇಬ್ಬರೇ ವಾಸವಿರುತ್ತೇವೆ. ನನಗೆ ಕೃಷಿ ಜಮೀನು ಇರುವುದಿಲ್ಲ. ನಮ್ಮ ಮನೆಯಲ್ಲಿ ದ್ವಿಚಕ್ರ ವಾಹನ ಇರುತ್ತದೆ. ಪುತ್ತೂರು-ಸುಳ್ಯ ರಸ್ತೆಯ

ಬಲಬದಿಯಲ್ಲಿ ನಮ್ಮ ಮನೆ ಇರುತ್ತದೆ. ಮಾರ್ಗದಿಂದ ನಮ್ಮ ಮನೆ ಕಾಣುವುದಿಲ್ಲ. ಮಾರ್ಗದಿಂದ ನಮ್ಮ ಮನಗೆ 50-60 ಮೀಟರ ದೂರದಲ್ಲಿರುತ್ತದೆ. ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ನೆರೆಕೆರೆಯವರ ಮನೆಗಳು ಇರುತ್ತವೆ. ನಮ್ಮ ಮನೆ ಕೌಡಿಚ್ಚಾರು ಜಂಕ್ಷನ್‌ನಿಂದ ಸುಳ್ಯ ಕಡೆಗೆ ಇರುತ್ತದೆ. ಕೌಡಿಚ್ಚಾರು ಜಂಕ್ಷನ್ನಲ್ಲಿ ಸುಮಾರು ಅಂಗಡಿ ಮುಂಗಟ್ಟುಗಳು ಇರುತ್ತವೆಂದರೆ ಸರಿ. ನಾವು ಹೊರಗಡೆ ಹೋಗುವಾಗ ಬೇರಯವರನ್ನು ಯಾರನ್ನೂ ನಿಲ್ಲಿಸಿ ಹೋಗುವುದಿಲ್ಲ. ನಮ್ಮ ಮನೆಯ ಕಾಪೌಂಡ್ ಗೋಡೆ ಸುಮಾರು ಅಂದಾಜು 6 ಅಡಿ ಅಗಲ ಇದ್ದು ಕಾಂಪೌಂಡ್ ಗೋಡೆಯ ಮೇಲೆ ಮುಳ್ಳುತಂತಿಯನ್ನು ಹಾಕಿರುತ್ತೇವೆ. ಕಾಪೌಂಡ್ ಗೋಡೆ ಹಾಗೂ ಮುಳ್ಳುತಂತಿ ಬೇಲಿ ಸೇರಿ ಅಂದಾಜು 10 ಅಡಿ ಆಗಬಹುದು ಎಂದರೆ ಸರಿ. ನಮ್ಮ ಮನೆಯ ಹಿಂಬದಿಯಲ್ಲಿ 4 ಫೀಟ್ ಎತ್ತರದ ಕಾಂಪೌಂಡ್ ಗೋಡೆ ಇರುತ್ತದೆ. ನಮ್ಮ ಮನೆಯು ಹೆಂಚಿನದ್ದಾಗಿದೆ. ನನ್ನ ಮನೆಯಲ್ಲಿ ಒಟ್ಟು 7 ಕೋಣೆಗಳು ಇರುತ್ತವೆ. ಮನೆಯ ಒಳಗೆ ಇರುವ ಎಲ್ಲಾ ಕೋಣೆಗಳಿಗೆ ಬೀಗ ಹಾಕುವ ವ್ಯವಸ್ಥೆ ಇರುವುದಿಲ್ಲ. ಬೀಗದ ಕೀಲಿ ಒಂದು ಜೊತೆ ನಮ್ಮ ಜೊತೆ ಇಟ್ಟುಕೊಂಡು ಇನ್ನೊಂದು ಜೊತೆ ಕೀಲಿಯನ್ನು ಮನೆಯಲ್ಲೇ ಇಡುತ್ತೇವೆ. ಆ ದಿನವೂ ಸಹ ಒಂದು ಜೊತೆ ಕೀಲಿನು ಮನೆಯಲ್ಲೇ ಇತ್ತು. ನಮ್ಮ ಮನೆಯಲ್ಲಿ ಒಟ್ಟು 4 ಕಪಾಟುಗಳು ಇದ್ದು 2 ದೇವರ ಕೋಣೆಯಲ್ಲಿ ಇದ್ದರೆ ಉಳಿದೆರಡು ಬೇರೆ ಬೇರೆ ಕೋಣೆಗಳಲ್ಲಿ ಇರುತ್ತವೆ. ನಾಲ್ಕು ಕಪಾಟುಗಳ ಪೈಕಿ ಚಿನ್ನದ ಆಭರಣಗಳನ್ನು ಇಟ್ಟ ಕಪಾಟುಗಳಿಗೆ ಮಾತ್ರ ಬೀಗ ಹಾಕುತ್ತೇವೆ. ಉಳಿದ ಕಪಾಟುಗಳಿಗೆ ಬೀಗ ಹಾಕುವುದಿಲ್ಲ. ಮನೆಯ ಒಳಗಡೆ ಪ್ರವೇಶಿಸುವಾಗ ಬಲಗಡೆ ದೇವರ ಕೋಣೆ ಇರುತ್ತದೇ. ಉಳಿದ 3 ಗೊಡ್ರೇಜ್‌ಗಳಿಗೆ ಬೀಗ ಹಾಕಲಾಗಿತ್ತು. ಚಿನ್ನದ ಆಭರಣಗಳಿದ್ದ ಗೊಡ್ರೇಜ್ ನ ಬಾಗಿಲು ತೆರೆದಿತ್ತು. ಚಿನ್ನಾಭರಣ ಇಟ್ಟ ಕಪಾಟಿನಲ್ಲಿ ಬಟ್ಟೆಬೆರಗಳು ಸಹ ಇದ್ದವು. ಅಲ್ಮೇರಾದಲ್ಲಿದ್ದ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ಚಿನ್ನಾಭರಣಗಳನ್ನು ಯಾವಾಗಲೂ ಆಲ್ಮೇರಾದಲ್ಲಿ ಲಾಕ್ ಮಾಡಿ ಇಡುತ್ತೇವೆ. ಅದಕ್ಕೆ ಯಾವಾಗಲೂ ಬೀಗ ಹಾಕುತ್ತೇವೆ.

ನಿಪಿ-1 ನ್ನು ನೀಡುವಾಗ ನನ್ನ ಒಂದೊಂದು ಆಭರಣ ತೂಕವನ್ನು ಪವನ್ ಲೆಕ್ಕದಲ್ಲಿ ಹೇಳಿರುತ್ತೇನೆ.

ನಿಪಿ-1 ನ್ನು ನೀಡಿದಾಗ ಸಮಯ ಸಂಜೆ 7-7.30 ಗಂಟೆ ಆಗಬಹುದು. ನಿಪಿ-1 ನ್ನು ನನ್ನ ಹಸ್ತಾಕ್ಷರದಲ್ಲಿ ಬರೆದಿರುತ್ತೇನೆ. ಪೊಲೀಸರು ಕೂಡಲೇ ನನ್ನನ್ನು ಅವರ ಜೀಪಿನಲ್ಲಿ ಕರೆದುಕೊಂಡು ನಮ್ಮ ಮನೆಗೆ ಬಂದರು. ಪೊಲೀಸರು ಸ್ಥಳಕ್ಕೆ ಬಂದು ಮನೆಯನ್ನೆಲ್ಲಾ ನೋಡಿ ಛಾಯಾಚಿತ್ರವನ್ನು

ತೆಗೆದಿರುತ್ತಾರೆ. ಪೊಲಿಸರು ಸ್ಥಳಕ್ಕೆ ಬಂದಾಗ ನಾನು, ಚಾಸಾ-2, ಚಾಸಾ4 ಮತ್ತು ವಿನಯಶ್ಯಾಮ ಇದ್ದೆವು. ಮರುದಿನ ಸಂಪ್ಯ ಪೋ ಠಾಣೆಯ ಪೊಲೀಸರು ನನ್ನನ್ನು ಠಾಣೆಗೆ ಬರಲು ಹೇಳಿದ್ದರು. ಬೇರೆ ಯಾರೂ ನನ್ನನ್ನು ಕರೆದಿರಲಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಒಂದು ಸುಳ್ಳು ಫಿರ್ಯಾದನ್ನು ನೀಡಿ ಆ ಪ್ರಕಾರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು ಮಾ ಗಳಿಗೂ ಮತ್ತು ಆರೋಪಿತರಿಗೂ ಹಾಗೂ ಪ್ರಕರಣಕ್ಕೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಕಳ್ಳತವಾದ 1 ವರ್ಷದ ನಂತರ ಬಂಟ್ವಾಳ ಪೋಲೀಸರು ಠಾಣೆಗೆ ಬರುಲು ಹೇಳಿದ್ದರು. ಆರೋಪಿ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ಮು ಮಾ ಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಬಂಟ್ವಾಳ ಠಾಣೆಗೆ ಹೋಗಿಲ್ಲ, ಸಂಪ್ಯ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಕೇಸಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.